**ದಿಃ 22-06-2024 ರಂದು ಆದ ಮಧ್ಯಂತರ ಅರ್ಜಿ ಸಂಖ್ಯೆ VII ರ ಆದೇಶದ ಅನ್ವಯ ಸಾಕ್ಷಿಗೆ ದಿನಾಂಕಃ 22.06.2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ. ವಿ ಆರ್ ಎನ್ ವಕೀಲರಿಂದ ಃ</u>**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಈಗಾಗಲೇ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆಯೆಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಮುಂದುವರೆದು ನನ್ನ ಪ್ರತಿವಾದ ಪತ್ರಕ್ಕೆ ಪೂರಕವಾಗುವಂತೆ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

| ಕ್ರಮ ಸಂಖ್ಯೆಃ | ದಾಖಲೆಗಳು | ನಿಶಾನೆಗಳು |
|---|---|---|
| 1. | ಈ ನ್ಯಾಯಾಲಯದ ಒ ಎಸ್ 6/2010 ರಲ್ಲಿ ನಾನು ಶ್ರೀಮತಿ ಪ್ರೇಮ ಲೀಲಾ ರವರ ಪರವಾಗಿ ಸಲ್ಲಿಸಿದ್ದ ವಾದ ಪತ್ರದ (3 ಹಾಳೆಗಳು) ಧೃಢೀಕೃತ ನಕಲು ಹಾಜರು ಪಡಿಸಿದ್ದು, ಅದನ್ನು | ನಿಪಿ-6 |
| 2. | ಒ ಎಸ್ 6/2010 ರ ಆದೇಶ ಪುಟದ (4 ಹಾಳೆಗಳು ) ಧೃಢೀಕೃತ ನಕಲು ಹಾಜರು ಪಡಿಸಿದ್ದು, ಅದನ್ನು | ನಿಪಿ-7 |
| 3. | ಒ ಎಸ್ 6/2010 ರಲ್ಲಿ ದಿಃ20-06-2019 ರಂದು ಕೋರ್ಟ್ ನಿಯೋಜಕರು ಸಲ್ಲಿಸಿದ್ದ ನಕ್ಷೆ ಹಾಗೂ ಸೂಚನಾ ಪತ್ರಕ್ಕೆ ಸಲ್ಲಿಸಿದ್ದ ಉತ್ತರ ಮತ್ತು ಮಹಜರ್ ಕಾಪಿಯ (4 ಹಾಳೆಗಳು ) ಧೃಢೀಕೃತ ನಕಲನ್ನು ಹಾಜರು ಪಡಿಸಿದ್ದು, ಅದನ್ನು | ನಿಪಿ-8 |

ಆದುದರಿಂದ ಪ್ರತಿವಾದ ಪತ್ರದಲ್ಲಿ ಕೋರಿಕೊಂಡಂತೆ ದಾವೆಯನ್ನು ವಜಾ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**<u>ಮುಂದುವರಿದ ಪಾಟೀಸವಾಲು ಃ ಪ್ರತಿವಾದಿಗಳ ಪರ ಶ್ರೀ.ಹೆಚ್ ಆರ್ ಯು ವಕೀಲರಿಂದ ಃ</u>**

ಅಸಲು ದಾವಾ ಸಂಖ್ಯೆ 6/2010 ರಲ್ಲಿ ದಾವಾ ಸ್ವತ್ತಿನ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ನಿಪಿ-4 ರ ಕ್ರಯ ಪತ್ರದಲ್ಲಿ ಕಾಣಿಸಿರುವ ವಿಸ್ತೀರ್ಣ ಮತ್ತು ಚೆಕ್ಕು ಬಂದಿಯನ್ನು ತೋರಿಸಿ ದಾವೆಯನ್ನು ಹೂಡಿದ್ದೆ ಎಂದರೆ ಸರಿ.

ಸದರಿ ದಾವೆಯಲ್ಲಿ ಎರೆಡೆರಡು ಬಾರಿ ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಲಾಗಿತ್ತು ಎಂದರೆ ಸರಿ. ನಿಪಿ-7 ದಾಖಲೆ ಸದರಿ ದಾವೆಯಲ್ಲಿ ಎರಡನೇ ಬಾರಿ ನ್ಯಾಯಾಲಯದಿಂದ ನಿಯೋಗಿಯವರು ನೇಮಕ ಆದಾಗ ನ್ಯಾಯಾಲಯಕ್ಕೆ ಸಲ್ಲಿಸಿದ್ದಂತಹ ದಾಖಲೆಗಳು. ನಿಪಿ-7 ದಾಖಲೆಗಳಿಗೆ ನಾವು ಸದರಿ ದಾವೆಯಲ್ಲಿ ತಕರಾರು ಸಲ್ಲಿಸಿದ್ದೆವು ಎಂದರೆ ಸರಿ. ನಿಪಿ-7 ದಾಖಲೆಗೆ ನಾವು ಸದರಿ ದಾವೆಯಲ್ಲಿ ಸಲ್ಲಿಸಿದ ತಕರಾರನ್ನು ನಾನು ನ್ಯಾಯಾಲಯಕ್ಕೆ ಈ ದಾವೆಯಲ್ಲಿಯೂ ಸಹ ಹಾಜರು ಪಡಿಸಿರುತ್ತೇನೆ. ನಿಪಿ-7 ದಾಖಲೆ ನಾನು ಈ ಹಿಂದೆ ಸಲ್ಲಿಸಿದ್ದ ದಾವೆಯಲ್ಲಿ ತೋರಿಸಿದ್ದ ದಾವಾ ಆಸ್ತಿಗೆ ವಿರುದ್ಧವಾಗಿ ಇತ್ತು. ಸಾಕ್ಷಿ ಮುಂದುವರೆದು, ಸದರಿ ದಾಖಲೆಯಲ್ಲಿ ತೋರಿಸಿದಂತೆ ಸ.ನಂ.225 ಮತ್ತು ಸ ನಂ.226 ರಲ್ಲಿ ವ್ಯತ್ಯಾಸವಾಗಿರುತ್ತದೆ ಎಂದು ನುಡಿಯುತ್ತಾರೆ.

2. ಒ ಎಸ್ 6/2010 ದಾವೆಯನ್ನು ಆ ದಾವೆಯ ಪ್ರತಿವಾದಿ ವಿರುದ್ಧ ಆ ದಾವೆಯ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ಶಾಶ್ವತ ನಿರ್ಭಂದಕಾಜ್ಞೆಯನ್ನು ನೀಡುವಂತೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆ ಅಂತಿಮವಾಗಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯ ತೀರ್ಪಿನ ಬಗ್ಗೆ ನಾನು ಈ ದಾವೆಯಲ್ಲಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 22.06.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಸಹಿ/-**
**ಪ್ರ.ದ.ನ್ಯಾ.ದಂಃ ಶೃಂಗೇರಿ.**